# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1331 (1566) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 17.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೈಗಾರಿಕಾ ನಿವೇಶನಗಳಲ್ಲಿ ಭೂಮಿ ಬಳಕೆಯ ಮಿತಿಯನ್ನು ಶೇ. 65 ರಿಂದ ಶೇ. 75 ಕ್ಕೆ ಹೆಚ್ಚಿಸಲು ಸರ್ಕಾರ ತೆಗೆದುಕೊಂಡಿರುವ ನಿರ್ಧಾರಕ್ಕೆ ಕಾರಣಗಳೇನು; | ರಾಜ್ಯದಲ್ಲಿ ಸುಲಲಿತ ವ್ಯವಹಾರಗಳಿಗೆ ಒತ್ತು ನೀಡಲು ಹೂಡಿಕೆದಾರರ ಅನುಸರಣೆಗಳನ್ನು ಕಡಿಮೆ ಮಾಡುವುದು ಮತ್ತು ನಿಯಂತ್ರಣಗಳಿಂದ ಮುಕ್ತಗೊಳಿಸುವಿಕೆಗೆ (Compliance Reduction and Deregulation) ಕ್ರಮ ಕೈಗೊಳ್ಳಲು ಕೇಂದ್ರೀಯ ಕಾರ್ಯಪಡೆಯು (Central Task Force) ಸಿದ್ಧಪಡಿಸಿರುವ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ Compliance Reduction and Deregulation Docket ರ II Building & Construction ರಲ್ಲಿ ಈ ಕೆಳಕಂಡಂತೆ ಸಲಹೆ ನೀಡಿರುತ್ತದೆ.<br><br>*"5. Priority Area: Amend building regulations to reduce land loss in industrial plots.*<br>*Suggestions for discussion with the states:*<br>*Amending building regulations is crucial to industrial growth, because, on average, industrial building in India lose 50% of land to building standards compliance. State may look at rationalizing the following aspects of building regulations for factories/industries:*<br>• *Setbacks*<br>• *Floor Area Ratio (FAR)*<br>• *Parking space*<br>• *Minimum plot area for industries*<br>*States may liberalize the above-stated norms while taking into account principals of fire Safety, disaster proneness of area and the nature of the industry".*<br><br>ಅದರಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕೆ ಪ್ರದೇಶಗಳಲ್ಲಿ ಭೂಮಿ ನಷ್ಟ ಕಡಿಮೆಗೊಳಿಸಿ ಗರಿಷ್ಠ ಭೂ ಬಳಕೆಗಾಗಿ ಕ್ರಮ ಕೈಗೊಳ್ಳಲಾಗಿರುತ್ತದೆ. |
| ಆ) | ಈ ಹೊಸ ನಿಯಮವು ಈಗಾಗಲೇ ಹಂಚಿಕೆಯಾಗಿರುವ ನಿವೇಶನಗಳಿಗೂ ಅನ್ವಯಿಸುತ್ತದೆಯೇ ಅಥವಾ ಕೇವಲ ಹೊಸ ನಿವೇಶನಗಳಿಗೆ ಮಾತ್ರ ಸೀಮಿತವೇ; | ಸರ್ಕಾರದ ಆದೇಶ ಸಂಖ್ಯೆ. ಸಿಐ 99 ಎಸ್ ಪಿ ಕ್ಯೂ 2025, ಬೆಂಗಳೂರು ದಿ:06-02-2026 ರ ನಂತರದಲ್ಲಿ ಸ್ವೀಕೃತವಾಗುವ ಎಲ್ಲಾ ಕಟ್ಟಡ ನಕ್ಷೆಗಳ / ಅಭಿವೃದ್ಧಿ ನಕ್ಷೆಗಳ ಅನುಮತಿಗಳಿಗೆ ಅನ್ವಯವಾಗುತ್ತದೆ. |

| | | |
|---|---|---|
| ಇ) | ಭೂಮಿ ಬಳಕೆಯ ಮಿತಿ ಹೆಚ್ಚಳದಿಂದ ಭೂಮಿ ಕಳೆದುಕೊಂಡ ರೈತರಿಗೆ ಸಿಗುವ ಪರಿಹಾರ ಅಥವಾ ಅಭಿವೃದ್ಧಿಪಡಿಸಿದ ಭೂಮಿಯ ಪಾಲಿನಲ್ಲಿ ಎಷ್ಟು ಪ್ರಮಾಣದಲ್ಲಿ ಏರಿಕೆಯಾಗಲಿದೆ; | ಈ ನಿಯಮಗಳು ಕಟ್ಟಡ ನಕ್ಷೆ / ಅಭಿವೃದ್ಧಿ ನಕ್ಷೆಗಳ ಅನುಮೋದನೆಗಳಿಗಾಗಿ ರೂಪಿಸಲಾಗಿರುವ ನಿಯಮಗಳಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿರುವುದಿಲ್ಲ. |
| ಈ) | ಕೈಗಾರಿಕಾ ಪ್ರದೇಶಗಳಲ್ಲಿ ಹಸಿರು ವಲಯ (Green Belt) ಮತ್ತು ಪರಿಸರ ಸಮತೋಲನ ಕಾಪಾಡಲು ಶೇ. 25 ರಷ್ಟು ಜಾಗ ಮೀಸಲಿಡುವುದು ಸಾಕಾಗುತ್ತದೆಯೇ; ಈ ಬಗ್ಗೆ ಪರಿಸರ ಇಲಾಖೆಯಿಂದ ತಾಂತ್ರಿಕ ವರದಿ ಪಡೆಯಲಾಗಿದೆಯೇ; | ದಿ:29-10-2025 ರಂದು ಕೇಂದ್ರ ಸರ್ಕಾರದ ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಹೊರಡಿಸಿರುವ ಕಛೇರಿ ಜ್ಞಾಪನ ಪತ್ರದಲ್ಲಿ ಹಸಿರು ವಲಯದ ಬಗ್ಗೆ ಸ್ಪಷ್ಟವಾದ ನಿರ್ದೇಶನ ನೀಡಿರುತ್ತದೆ. ಅದರಂತೆ, ಹಸಿರು ವಲಯದ ಮಾನದಂಡಗಳನ್ನು ಅಳವಡಿಸಿಕೊಳ್ಳಲಾಗಿದೆ. |
| ಉ) | ಈ ತಿದ್ದುಪಡಿಯಿಂದ ರಾಜ್ಯಕ್ಕೆ ನಿರೀಕ್ಷಿತ ಹೆಚ್ಚುವರಿ ಬಂಡವಾಳ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಯ ಪ್ರಮಾಣ ಎಷ್ಟು? | ಈ ನಿಯಮಗಳು ರಾಜ್ಯದಲ್ಲಿ ಸುಲಲಿತ ವ್ಯವಹಾರಗಳಿಗೆ ಒತ್ತು ನೀಡಲು ಹೂಡಿಕೆದಾರರ ಅನುಸರಣೆಗಳನ್ನು ಕಡಿಮೆ ಮಾಡುವುದು ಮತ್ತು ನಿಯಂತ್ರಣಗಳಿಂದ ಮುಕ್ತಗೊಳಿಸುವಿಕೆ (Compliance Reduction and Deregulation) ಯನ್ವಯ ಕೈಗಾರಿಕಾ ಪ್ರದೇಶಗಳಲ್ಲಿ ಭೂಮಿಯ ಸದ್ಬಳಕೆಗಾಗಿ ರೂಪಿಸಿರುವ ನಿಯಮಗಳಾಗಿವೆ. |

**ಸಿಐ 182 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು